ಗದಗ ಸಂಜೆ

# ಅನುಭವ ಮಂಟಪದ ಭಾವಚಿತ್ರ ನನ್ನನ್ನು ಭಾವುಕನನ್ನಾಗಿಸಿದೆ-ಸಿದ್ದರಾಮಯ್ಯ

**ಗದಗ ಸಂಜೆ ವಾರ್ತೆ**

ಹುಬ್ಬಳ್ಳಿ : ಈ ಜಗತ್ತಿನ ಮೊದಲ ಸಂಸತ್ತಿನ ಭಾವಚಿತ್ರ ಅನುಭವ ಮಂಟಪದ ಚಿತ್ರ ನನ್ನನ್ನು ಭಾವುಕನನ್ನಾಗಿಸಿದೆ. ಅಲ್ಲಮಪ್ರಭುಗಳ ಅಧ್ಯಕ್ಷತೆಯಲ್ಲಿ ಮಹಾ ಮಾನವತಾವಾದಿ ಬಸವಣ್ಣನವರು ಮತ್ತು ವಚನಗಾರ್ತಿ ಅಕ್ಕಮಹಾದೇವಿ ಯವರೊಂದಿಗೆ ಚರ್ಚಿಸುತ್ತಿರುವ ಈ ಚಿತ್ರ ತುಂಬಾ ಮನಮೋಹಕವಾಗಿದೆ. ಇಂತಹ ಸುಂದರ ಚಿತ್ರವನ್ನು ನಿಮ್ಮ ಕಚೇರಿಯಲ್ಲಿ ಅಳವಡಿಸಿದ್ದಕ್ಕೆ ನಿಮ್ಮನ್ನು ನಾನು ವೈಯಕ್ತಿಕವಾಗಿ ಅಭಿನಂದಿಸುತ್ತೇನೆ ಎಂದು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರಿಗೆ ಅಭಿಮಾನದಿಂದ ಹೇಳಿದ ಅಪರೂಪದ ಪ್ರಸಂಗ ನಿನ್ನೆಯ ದಿನ ವಿಧಾನ ಪರಿಷತ್ತಿನ ಸಭಾಪತಿಗಳ ಕಚೇರಿಯಲ್ಲಿ ನಡೆಯಿತು ಎಂದು ಡಾ. ಬಸವರಾಜ ಧಾರವಾಡ ತಿಳಿಸಿದ್ದಾರೆ.



ನಿನ್ನೆ ಶುಕ್ರವಾರ ದಿವಸ ವಿಧಾನ ಪರಿಷತ್ತಿನ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿ ತೆರಳುತ್ತಿದ್ದ ಮುಖ್ಯಮಂತ್ರಿಗಳನ್ನು ಸಭಾಪತಿ ಬಸವರಾಜ ಹೊರಟ್ಟಿಯವರು ತಮ್ಮ ಕಚೇರಿಗೆ ಆಹ್ವಾನಿಸಿ ತಾವು ಹೊಸದಾಗಿ ಅಳವಡಿಸಿದ್ದ ಅನುಭವ ಮಂಟಪದ ಭಾವಚಿತ್ರವನ್ನು ಮುಖ್ಯಮಂತ್ರಿಗಳಿಗೆ ತೋರಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಈ ರೀತಿ ಭಾವುಕರಾದರು.

ಬಸವಣ್ಣ ಈ ಜಗತ್ತಿಗೆ ಸಮಾನತೆಯನ್ನು ಸಾರಿದ ಮಹಾ ಮಾನವತಾವಾದಿ. ಅಂದಿನ ದಿನಗಳಲ್ಲಿಯೆ ಕಲ್ಯಾಣದಲ್ಲಿ ಸಂಸತ್ತನ್ನು ರಚಿಸಿ ಆ ಮೂಲಕ ಅನೇಕ ಮಹತ್ತರ ವಿಷಯಗಳನ್ನು ಚರ್ಚಿಸಲು ಅನುವು ಮಾಡಿಕೊಟ್ಟ ಮಹಾತ್ಮ. ಸರ್ವರಿಗೂ ಸಮ ಬಾಳು ಸಮಪಾಲು ಎನ್ನುವ ತತ್ವವನ್ನು ಜಗತ್ತಿಗೆ ಬೋಧಿಸಿ ಜಾತಿ, ಮತ, ಪಂಥದ ಭೇದವಿಲ್ಲದೆ ಎಲ್ಲ ಸಮಾಜದ ಮಹನೀಯರೂ, ಸ್ತ್ರೀ ಪುರುಷರೆನ್ನದೆ ಎಲ್ಲರೂ ವಚನಗಳನ್ನು ರಚಿಸಬಹುದೆನ್ನುವ ದೊಡ್ಡ ಕನಸನ್ನು ಸಾಕಾರಗೊಳಿಸಿದ ಧೀಮಂತ. ಕಾಯಕ ತತ್ವವನ್ನು ಈ ಜಗತ್ತಿಗೆ ಬೋಧಿಸಿದ್ದಲ್ಲದೆ ಎಲ್ಲರೂ ದುಡಿಯಿರಿ ಎಂಬ ಕಾಯಕ ನೀತಿಯನ್ನು ಹೇಳಿಕೊಟ್ಟ ಬಸವಣ್ಣನ ಬಗ್ಗೆ ಎಷ್ಟು ಮಾತನಾಡಿದರೂ ಕಡಿಮೆಯೆ ಎಂದು ಸಿದ್ದರಾಮಯ್ಯ ನುಡಿದರು.

ಸರ್ವರೂ ಶ್ರಮಿಸಿ ಉತ್ಪಾದಿಸಿದ ಉತ್ಪಾದನೆಯನ್ನು ಸರ್ವರೂ ಸಮನಾಗಿ ಹಂಚಿಕೊಳ್ಳಬೇಕೆಂಬ ನಿಲುವು ಬಸವಣ್ಣನವರದ್ದಾಗಿತ್ತು. ಆ ನಿಲುವನ್ನೆ ಇಂದಿಗೂ ನಾವುಗಳು ಅನುಸರಿಸಿಕೊಂಡು ಜೀವನದ ಪಥದದಲ್ಲಿ ಸಾಗುತ್ತಿದ್ದೇವೆ. ಅವರ ಸ್ಮರಣೆಯ ಈ ಭಾವ ಚಿತ್ರವು ನಮಗೆ ಸದಾಕಾಲ ಸ್ಫೂರ್ತಿಯಾಗಿದ್ದು, ಈ ಭಾವಚಿತ್ರವನ್ನು ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿಯೂ ಅಳವಡಿಸಲು ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭಾಪತಿ ಬಸವರಾಜ ಹೊರಟ್ಟಿಯವರಿಗೆ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಅನೇಕ ಗಣ್ಯ ಮಾನ್ಯರು, ಸಭಾಪತಿ ಅವರ ವಿಶೇಷ ಅಧಿಕಾರಿ ಶೈಲಾ ಕೆ. ಡಿ. ವಿಶೇಷ ಕರ್ತವ್ಯಾಧಿಕಾರಿ ಡಾ. ಮಹೇಶ ವಾಳ್ವೇಕರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು ಎಂದು ಡಾ. ಬಸವರಾಜ ಧಾರವಾಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅನುಭವ ಮಂಟಪದ ಭಾವಚಿತ್ರ ನನ್ನನ್ನು ಭಾವುಕನನ್ನಾಗಿಸಿದೆ: ಸಿದ್ದರಾಮಯ್ಯ



ಗದಗ, ಜು. 16. ಈ ಜಗತ್ತಿನ ಮೊದಲ ಸಂಸತ್ತಿನ ಭಾವಚಿತ್ರ ಅನುಭವ ಮಂಟಪದ ಚಿತ್ರ ನನ್ನನ್ನು ಭಾವುಕನನ್ನಾಗಿಸಿದೆ. ಅಲ್ಲಮಪ್ರಭುಗಳ ಅಧ್ಯಕ್ಷತೆಯಲ್ಲಿ ಮಹಾ ಮಾನವತಾವಾದಿ ಬಸವಣ್ಣನವರು ಮತ್ತು ವಚನಗಾರ್ತಿ ಅಕ್ಕಮಹಾದೇವಿಯವರೊಂದಿಗೆ ಚರ್ಚಿಸುತ್ತಿರುವ ಈ ಚಿತ್ರ ತುಂಬಾ ಮನಮೋಹಕವಾಗಿದೆ. ಇಂತಹ ಸುಂದರ ಚಿತ್ರವನ್ನು ನಿಮ್ಮ ಕಚೇರಿಯಲ್ಲಿ ಅಳವಡಿಸಿದ್ದಕ್ಕೆ ನಿಮ್ಮನ್ನು ನಾನು ವೈಯಕ್ತಿಕವಾಗಿ ಅಭಿನಂದಿಸುತ್ತೇನೆ ಎಂದು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರಿಗೆ ಅಭಿಮಾನದಿಂದ ಹೇಳಿದ ಅಪರೂಪದ ಪ್ರಸಂಗ ನಿನ್ನೆಯ ದಿನ ವಿಧಾನ ಪರಿಷತ್ತಿನ ಸಭಾಪತಿಗಳ ಕಚೇರಿಯಲ್ಲಿ ನಡೆಯಿತು ಎಂದು ಡಾ. ಬಸವರಾಜ ಧಾರವಾಡ ತಿಳಿಸಿದ್ದಾರೆ.

ನಿನ್ನೆ ಶುಕ್ರವಾರ ದಿವಸ ವಿಧಾನ ಪರಿಷತ್ತಿನ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿ ತೆರಳುತ್ತಿದ್ದ ಮುಖ್ಯಮಂತ್ರಿಗಳನ್ನು ಸಭಾಪತಿ ಬಸವರಾಜ ಹೊರಟ್ಟಿಯವರು ತಮ್ಮ ಕಚೇರಿಗೆ ಆಹ್ವಾನಿಸಿ ತಾವು ಹೊಸದಾಗಿ ಅಳವಡಿಸಿದ್ದ ಅನುಭವ ಮಂಟಪದ ಭಾವಚಿತ್ರವನ್ನು ಮುಖ್ಯಮಂತ್ರಿಗಳಿಗೆ ತೋರಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಈ ರೀತಿ ಭಾವುಕರಾದರು.

ಬಸವಣ್ಣ ಈ ಜಗತ್ತಿಗೆ ಸಮಾನತೆಯನ್ನು ಸಾರಿದ ಮಹಾ ಮಾನವತಾವಾದಿ. ಅಂದಿನ ದಿನಗಳಲ್ಲಿಯೆ ಕಲ್ಯಾಣದಲ್ಲಿ ಸಂಸತ್ತನ್ನು ರಚಿಸಿ ಆ ಮೂಲಕ ಅನೇಕ ಮಹತ್ತರ ವಿಷಯಗಳನ್ನು ಚರ್ಚಿಸಲು ಅನುವು ಮಾಡಿಕೊಟ್ಟ ಮಹಾತ್ಮ. ಸರ್ವರಿಗೂ ಸಮ ಬಾಳು ಸಮಪಾಲು ಎನ್ನುವ ತತ್ವವನ್ನು ಜಗತ್ತಿಗೆ ಬೋಧಿಸಿ ಜಾತಿ, ಮತ, ಪಂಥದ ಭೇದವಿಲ್ಲದೆ ಎಲ್ಲ ಸಮಾಜದ ಮಹನೀಯರೂ, ಸ್ತ್ರೀ ಪುರುಷರೆನ್ನದೆ ಎಲ್ಲರೂ ವಚನಗಳನ್ನು ರಚಿಸಬಹುದೆನ್ನುವ ದೊಡ್ಡ ಕನಸನ್ನು ಸಾಕಾರಗೊಳಿಸಿದ ಧೀಮಂತ. ಕಾಯಕ ತತ್ವವನ್ನು ಈ ಜಗತ್ತಿಗೆ ಬೋಧಿಸಿದ್ದಲ್ಲದೆ ಎಲ್ಲರೂ ದುಡಿಯಿರಿ ಎಂಬ ಕಾಯಕ ನೀತಿಯನ್ನು ಹೇಳಿಕೊಟ್ಟ ಬಸವಣ್ಣನ ಬಗ್ಗೆ ಎಷ್ಟು ಮಾತನಾಡಿದರೂ ಕಡಿಮೆಯೆ ಎಂದು ಸಿದ್ದರಾಮಯ್ಯ ನುಡಿದರು.

ಸರ್ವರೂ ಶ್ರಮಿಸಿ ಉತ್ಪಾದಿಸಿದ ಉತ್ಪಾದನೆಯನ್ನು ಸರ್ವರೂ ಸಮನಾಗಿ ಹಂಚಿಕೊಳ್ಳಬೇಕೆಂಬ ನಿಲುವು ಬಸವಣ್ಣನವರದ್ದಾಗಿತ್ತು. ಆ ನಿಲುವನ್ನೆ ಇಂದಿಗೂ ನಾವುಗಳು ಅನುಸರಿಸಿಕೊಂಡು ಜೀವನದ ಪಥದದಲ್ಲಿ ಸಾಗುತ್ತಿದ್ದೇವೆ. ಅವರ ಸ್ಮರಣೆಯ ಈ ಭಾವ ಚಿತ್ರವು ನಮಗೆ ಸದಾಕಾಲ ಸ್ಪೂರ್ತಿಯಾಗಿದ್ದು, ಈ ಭಾವಚಿತ್ರವನ್ನು ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿಯೂ ಅಳವಡಿಸಲು ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭಾಪತಿ ಬಸವರಾಜ ಹೊರಟ್ಟಿಯವರಿಗೆ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಅನೇಕ ಗಣ್ಯ ಮಾನ್ಯರು, ಸಭಾಪತಿ ಅವರ ವಿಶೇಷ ಅಧಿಕಾರಿ ಶೈಲಾ ಕೆ.ಡಿ. ವಿಶೇಷ ಕರ್ತವ್ಯಾಧಿ ಕಾರಿ ಡಾ. ಮಹೇಶ ವಾಳ್ವೇಕರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು ಎಂದು ಡಾ. ಬಸವರಾಜ ಧಾರವಾಡ ತಿಳಿಸಿದ್ದಾರೆ.

ರವಾಡ
ಾರ 2023

ಇಂದು ಸಂಜೆ

IS Email indusanje@gmail.com

# ಅನುಭವ ಮಂಟಪದ ಭಾವಚಿತ್ರ ನನ್ನನ್ನು ಭಾವುಕನನ್ನಾಗಿಸಿದೆ–ಸಿದ್ದರಾಮಯ್ಯ



**ಗದಗ:** ಈ ಜಗತ್ತಿನ ಮೊದಲ ಸಂಸತ್ತಿನ ಭಾವಚಿತ್ರ ಅನುಭವ ಮಂಟಪದ ಚಿತ್ರ ನನ್ನನ್ನು ಭಾವುಕನನ್ನಾಗಿಸಿದೆ. ಅಲ್ಲಮಪ್ರಭುಗಳ ಅಧ್ಯಕ್ಷತೆಯಲ್ಲಿ ಮಹಾ ಮಾನವತಾವಾದಿ ಬಸವಣ್ಣನವರು ಮತ್ತು ವಚನಗಾರ್ತಿ ಅಕ್ಕಮಹಾದೇವಿಯವರೊಂದಿಗೆ ಚರ್ಚಿಸುತ್ತಿರುವ ಈ ಚಿತ್ರ ತುಂಬಾ ಮನಮೋಹಕವಾಗಿದೆ.

"ಇಂತಹ ಸುಂದರ ಚಿತ್ರವನ್ನು ನಿಮ್ಮ ಕಚೇರಿಯಲ್ಲಿ ಅಳವಡಿಸಿದ್ದಕ್ಕೆ ನಿಮ್ಮನ್ನು ನಾನು ವೈಯಕ್ತಿಕವಾಗಿ ಅಭಿನಂದಿಸುತ್ತೇನೆ ಎಂದು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಿಧಾನಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರಿಗೆ ಅಭಿಮಾನದಿಂದ ಹೇಳಿದ ಅಪರೂಪದ ಪ್ರಸಂಗ ನಿನ್ನೆಯ ದಿನ ವಿಧಾನ ಪರಿಷತ್ತಿನ ಸಭಾಪತಿಗಳ ಕಚೇರಿಯಲ್ಲಿ ನಡೆಯಿತು ಎಂದು ಡಾ. ಬಸವರಾಜ ಧಾರವಾಡ ತಿಳಿಸಿದ್ದಾರೆ.

ನಿನ್ನೆ ಶುಕ್ರವಾರ ದಿವಸ ವಿಧಾನ ಪರಿಷತ್ತಿನ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿ ತೆರಳುತ್ತಿದ್ದ ಮುಖ್ಯಮಂತ್ರಿಗಳನ್ನು ಸಭಾಪತಿ ಬಸವರಾಜ ಹೊರಟ್ಟಿಯವರು ತಮ್ಮ ಕಚೇರಿಗೆ ಆಹ್ವಾನಿಸಿ ತಾವು ಹೊಸದಾಗಿ ಅಳವಡಿಸಿದ್ದ ಅನುಭವ ಮಂಟಪದ ಭಾವಚಿತ್ರವನ್ನು ಮುಖ್ಯಮಂತ್ರಿಗಳಿಗೆ ತೋರಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಈ ರೀತಿ ಭಾವುಕರಾದರು.

ಬಸವಣ್ಣ ಈ ಜಗತ್ತಿಗೆ ಸಮಾನತೆಯನ್ನು ಸಾರಿದ ಮಹಾ ಮಾನವತಾವಾದಿ. ಅಂದಿನ ದಿನಗಳಲ್ಲಿಯೆ ಕಲ್ಯಾಣದಲ್ಲಿ ಸಂಸತ್ತನ್ನು ರಚಿಸಿ ಆ ಮೂಲಕ ಅನೇಕ ಮಹತ್ವದ ವಿಷಯಗಳನ್ನು ಚರ್ಚಿಸಲು ಅನುವು ಮಾಡಿಕೊಟ್ಟ ಮಹಾತ್ಮ. ಸರ್ವರಿಗೂ ಸಮ ಪಾಲು ಸಮಬಾಳು ಎನ್ನುವ ತತ್ವವನ್ನು ಜಗತ್ತಿಗೆ ಬೋಧಿಸಿ ಜಾತಿ, ಮತ, ಪಂಥದ ಭೇದವಿಲ್ಲದೆ ಎಲ್ಲ ಸಮಾಜದ ಮಹನೀಯರೂ, ಸ್ತ್ರೀ ಪುರುಷರೆನ್ನದೆ ಎಲ್ಲರೂ ವಚನಗಳನ್ನು ರಚಿಸಬಹುದೆನ್ನುವ ದೊಡ್ಡ ಕನಸನ್ನು ಸಾಕಾರಗೊಳಿಸಿದ ಧೀಮಂತ. ಕಾಯಕ ತತ್ವವನ್ನು ಈ ಜಗತ್ತಿಗೆ ಬೋಧಿಸಿದ್ದಲ್ಲದೆ ಎಲ್ಲರೂ ದುಡಿಯಬೇಕು ಎಂಬ ಕಾಯಕ ನೀತಿಯನ್ನು ಹೇಳಿಕೊಟ್ಟ ಬಸವಣ್ಣನ ಬಗ್ಗೆ ಎಷ್ಟು ಮಾತನಾಡಿದರೂ ಕಡಿಮೆಯೆ ಎಂದು ಸಿದ್ದರಾಮಯ್ಯ ನುಡಿದರು.

ಸರ್ವರೂ ಶ್ರಮಿಸಿ ಉತ್ಪಾದಿಸಿದ ಉತ್ಪಾದನೆಯನ್ನು ಸರ್ವರೂ ಸಮನಾಗಿ ಹಂಚಿಕೊಳ್ಳಬೇಕೆಂಬ ನಿಲುವು ಬಸವಣ್ಣನವರದ್ದಾಗಿತ್ತು. ಆ ನಿಲುವನ್ನೆ ಇಂದಿಗೂ ನಾವುಗಳು ಅನುಸರಿಸಿಕೊಂಡು ಜೀವನದ ಪಥದಲ್ಲಿ ಸಾಗುತ್ತಿದ್ದೇವೆ. ಅವರ ಸ್ಮರಣೆಯ ಈ ಭಾವ ಚಿತ್ರವು ನಮಗೆ ಸದಾಕಾಲ ಸ್ಫೂರ್ತಿಯಾಗಿದ್ದು, ಈ ಭಾವಚಿತ್ರವನ್ನು ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿಯೂ ಅಳವಡಿಸಲು ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭಾಪತಿ ಬಸವರಾಜ ಹೊರಟ್ಟಿಯವರಿಗೆ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಅನೇಕ ಗಣ್ಯ ಮಾನ್ಯರು, ಸಭಾಪತಿ ಅವರ ವಿಶೇಷ ಅಧಿಕಾರಿ ಶೈಲಾ ಕೆ. ಡಿ. ವಿಶೇಷ ಕರ್ತವ್ಯಾಧಿಕಾರಿ ಡಾ. ಮಹೇಶ ವಾಳ್ವೇಕರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು ಎಂದು ಡಾ. ಬಸವರಾಜ ಧಾರವಾಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.